॥ ಶ್ರೀಗುರುಭ್ಯೋನಮಃ ॥

## ಭಾರತದ ಒಂದು ವಾಕ್ಯದಿಂದ ಮಧ್ವಸಿದ್ಧಾಂತದ ಸರ್ವ ಸಾರ ಸಂಗ್ರಹ

ಮಧ್ವಮತದ ಸರ್ವರಹಸ್ಯವೂ ಅದರ ಪಾರಮಾರ್ಥಿಕತೆಯೂ ಈ ಒಂದು ಶ್ಲೋಕದಿಂದ ಸಿದ್ಧಿಸುವುದೆಂದು

ಏಷನಿಷ್ಕಂಟಕಃ ಪಂಥಾ ಯತ್ರ ಸಂಪೂಜ್ಯತೇ ಹರಿಃ ॥

ಕುಪಥಂ ತಂ ವಿಜಾನೀಯಾತ್ ಗೋವಿಂದರಹಿತಾಗಮಂ ॥

— ಇತಿ ಭಾರತೇ ॥

ಇತಿ ಭಾರತವಾಕ್ಯಂ ಹಿ ಗೋವಿಂದರಹಿತಾಗಮಂ ।
ಕುಪಥಂ ವಕ್ತ್ಯತೋ ವ್ಯಾಸೀನ್ನಿರ್ಮೂಲಂ ನಿರ್ಗುಣಂ ತವ ।
ಅವೈಷ್ಣವಪುರಾಣನಾಮವೈಷ್ಣವಮತಸ್ಯ ಚ ।
ಅವೈಷ್ಣವಶುತೀನಾಂ ಚ ಕುಪಥತ್ವಮಭೂದಹೋ ।
ಹರೇರ್ಭಿನ್ನತ್ವ ಪೂಜ್ಯತ್ವ ಸ್ವಾಮಿತ್ವ ಪ್ರತಿಪಾದಿಕಾ ।
ನಿಷ್ಕಂಟಕಾ ಮಾಧ್ವಶುದ್ಧ ಪದ್ಧತಿಶ್ಚೇತಿ ಸಿದ್ಧ್ಯತಿ ॥

ಗೋವಿಂದನಿಂದ ರಹಿತವಾದ ಆಗಮವು ಕುಮಾರ್ಗವಾದುದರಿಂದ ಪರನಿಂದ ಹೇಳಿದ ನೈರ್ಗುಣ್ಯಮತಕ್ಕೆ ಗೋವಿಂದ ರಹಿತವಾದ ಆಗಮವಿರುವುದರಿಂದ ಕುಮತಕ್ಕೆ ಅರ್ಥಸಾಧಕತ್ವವಿರುವುದರ ದೆಶೆಯಿಂದ ನಿರ್ಮೂಲವಾಯಿತು ಎಂದರೆ ಅರ್ಥಸಾಧತ್ವವಿಲ್ಲವು. ಅವೈಷ್ಣವವೆನಿಸಿದ ಶೈವ, ಬ್ರಾಹ್ಮ್ಯ ಪುರಾಣಗಳಿಗೂ, ಅವೈಷ್ಣವವಾದ ಪಾಶುಪತಾದಿ ಮತಕ್ಕೂ ರುದ್ರಾದಿ ವಿಷಯತ್ವೇನ ಅವರಿಂದ ಅಂಗೀಕೃತಗಳಾದ ಆ ವೈಷ್ಣವವೆಂದು ಕರೆಯುವ ಶ್ರುತಿಗಳಿಗೂ, ಕುಮಾರ್ಗತ್ವವು ಉಂಟಾಯಿತು.

ಶ್ರೀಹರಿಯು ಭಿನ್ನತ್ವ, ಪೂಜ್ಯತ್ವ, ಸ್ವಾಮಿತ್ವವನ್ನು ಪ್ರತಿಪಾನೆನಮಾಡುವ ಮಾಧ್ವ ಶುದ್ಧ ಪದ್ಧತಿಗೆ ನಿಷ್ಕಂಟಕವು ನಿಶ್ಚಿತ್ತವಾದದ್ದೆಂದು ಸಿದ್ಧಿಸಿತು. ಆದುದರಿಂದ ಮೇಲೆ ಹೇಳಿದ ಯಾವ ಶಾಸ್ತ್ರದಲ್ಲಿ ಶ್ರೀಹರಿಯು ಸಮ್ಯಕ್ ಭಕ್ತಿಯಿಂದ ಪೂಜಿತನಾಗುತ್ತಾನೆಯೋ ಆ ಈ ಮಾರ್ಗವೇ ನಿಷ್ಕಂಟಕವಾದುದು. ಗೋವಿಂದನಿಂದ (ವೇದಪ್ರತಿಪಾದ್ಯನಾದ ಹರಿಯಿಂದ ) ರಹಿತವಾದ ಆಗಮವು ಕುಪಥ, ಕುಮಾರ್ಗವೆಂಬುದಾಗಿ ತಿಳಿಯುವುದು ಎಂದು ಅರ್ಥವುಳ್ಳ ಭಾರತದ ''ಏಷನಿಷ್ಕಂಟಕಃ'' ಎಂಬ ಒಂದು ಶ್ಲೋಕದಿಂದಲೇ ಸರ್ವಮಧ್ವಸಿದ್ಧಾಂತವು (ಮಾಧ್ವರಾದ್ಧಾಂತಗಳೂ) ಸಿದ್ಧಿಸುತ್ತದೆ.

॥ ಶ್ರೀಮದ್ವೇಶಾರ್ಪಣಮಸ್ತು ॥